**ದಿನಾಂಕಃ 29.07.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಾದ ಶ್ರಿ.ಎ ಬಿ ಎಸ್ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆ ಎಂದು ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿದೆ ಮತ್ತು ವಿಷಯ ತಿಳಿದುಕೊಂಡು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ನಮ್ಮ ತಂದೆ ಶ್ರೀ ಎಸ್ ತ್ಯಾಗರಾಜರನ್ ರವರು ಮಾಡಿದ ದಿಃ24.03.2014 ರ ವಿಲ್ ಹಾಜರುಪಡಿಸಿದ್ದು, ಅದನ್ನು ಪುರಾವೆಗೊಳಪಟ್ಟು ನಿ.ಪಿ 1 ಎಂದು ಗುರುತಿಸಲಾಯಿತು.

ಅವರ ಮರಣ ಪ್ರಮಾಣಪತ್ರವನ್ನು ನಿಪಿ 2 ಎಂದು ಗುರುತಿಸಲಾಯಿತು. ನಮ್ಮ ತಾಯಿಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿ . ಪಿ 3 ಎಂದು ಗುರುತಿಸಲಾಯಿತು. ನನ್ನ ಆಧಾರ್ ಕಾರ್ಡನ ನೋಟರೈಸ್ಡ ನಕಲನ್ನು ಹಾಜರುಪಡಿಸಿದ್ದು , ನಿ.ಪಿ 4 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಯನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

29.07.2024
(ರವೀಂದ್ರ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.